**Code No. 18 Z**

### ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರೌಢ ದರ್ಜೆ – ತೃತೀಯ ಪತ್ರಿಕೆ

## ಸೂತ್ರಗಳು ಮತ್ತು ಸಂಕ್ಷೇಪಿಸುವಿಕೆ

ಜೂನ್, 2016 ಸಮಯ : 2½ ಗಂಟೆಗಳು

ಅಂಕಗಳು : 100

***ಸೂಚನೆ :*** ಉತ್ತರಗಳು ಸಂಕ್ಷಿಪ್ತ ಹಾಗೂ ಸಮಂಜಸವಾಗಿರಬೇಕು.

I. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಒಂದಕ್ಕೆ*** ಮಾತ್ರ ಉತ್ತರಿಸಿ : 1 × 15 = 15

1. ದ್ವಿರೂಪ ವರ್, ತರ್, ದರ್ ಉದಾಹರಣೆ ಸಹಿತ ವಿವರಿಸಿ.

***ಅಥವಾ***

2. ಅರ್ಧ ವೃತ್ತಗಳನ್ನು ಉಪಯೋಗಿಸುವ ವಿಧಾನಗಳನ್ನು ಉದಾಹರಣೆ ಸಹಿತ ವಿವರಿಸಿ.

II. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಮೂರಕ್ಕೆ*** ಟಿಪ್ಪಣಿ ಬರೆಯಿರಿ : 3 × 5 = 15

1. ಅಧೋಮುಖ 'ರ'
2. ಸಂಕ್ಷಿಪ್ತಾಕ್ಷರಗಳನ್ನು ಬರೆಯುವ ಕ್ರಮ
3. ಸ್ತ್ರ ಅಥವಾ ಷ್ಟ್ರ ದೊಡ್ಡ ಕುಣಿಕೆಗಳು
4. ವ ಕೊಕ್ಕೆ
5. ಪ ರೇಖಾಕ್ಷರದ ಅಂತ್ಯಸರ್ಗಗಳು

III. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದು*** ಪದಗಳಿಗೆ ಅರ್ಥ ವ್ಯತ್ಯಾಸವುಳ್ಳ ಪದಗಳನ್ನು ಬರೆಯಿರಿ : 5 × 2 = 10

1. ದುರಾಲೋಚನೆ – ದೂರಾಲೋಚನೆ
2. ಹೇಳುತ್ತಿರುವ – ಹೇಳದಿರುವ
3. ರಾಜ್ಯೋತ್ಸವ – ರಜತೋತ್ಸವ
4. ಸಮರ್ಪಕ – ಸಂಪರ್ಕ
5. ಸಕಲ – ಸಕಾಲ
6. ಬಂತು – ಬಂದು
7. ಉತ್ಪತ್ತಿಯನ್ನು – ಉತ್ಪಾದನೆ

[ Turn over

IV. ಈ ಕೆಳಗಿನ ಪದಗಳಿಗೆ ಸಂಕ್ಷೇಪ ರೂಪದ ರೇಖಾಕ್ಷರಗಳನ್ನು ಬರೆಯಿರಿ : $5 \times 1 = 5$

1. ಪಾಶ್ಚಾತ್ಯ
2. ನಗರೀಕರಣ
3. ತೃಪ್ತಿಪಡಿಸು
4. ನಿಮ್ಮಂತಹವರು
5. ಮರುಮುಟ್ಟುಗಳು

V. ಈ ಕೆಳಗಿನ ಪದಗಳಿಗೆ ಪದಸಮೂಹವನ್ನು ಬರೆಯಿರಿ : $5 \times 1 = 5$

1. ತರಿಸಬೇಕೆಂದಿದೆಯೋ ಏನೋ
2. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್
3. ಶಸ್ತ್ರ ಚಿಕಿತ್ಸೆಯಿಂದ
4. ಸಾಂಸ್ಕೃತಿಕ ಪ್ರಸಾರ ಯೋಜನೆ
5. ಹೆಚ್ಚಿನ ಹಣ ಸಹಾಯ

VI. ಈ ಕಳಗೆ ಕೊಟ್ಟಿರುವ ವಿಷಯವನ್ನು ಪರೋಕ್ಷ ವಿಧಾನದಲ್ಲಿ 500 ಅಕ್ಷರಗಳಿಗೆ ಮೀರದಂತೆ ಸಂಕ್ಷೇಪಿಸಿ ಬರೆಯಿರಿ : 50

ಭಾರತದ ಪ್ರಧಾನ ಮಂತ್ರಿಗಳು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ದೆಹಲಿಯ ಕೆಂಪುಕೋಟೆಯ ಮೇಲಿಂದ ರಾಷ್ಟ್ರವನ್ನುದ್ದೇಶಿಸಿ ಈ ರೀತಿ ಭಾಷಣ ಮಾಡಿದರು.

ಮಿತ್ರರೇ,

ಪ್ರತಿ ಸ್ವಾತಂತ್ರ್ಯ ವಾರ್ಷಿಕೋತ್ಸವವು ದೇಶಕ್ಕೆ ಪವಿತ್ರವಾದುದು. ಪ್ರತಿ ವಾರ್ಷಿಕೋತ್ಸವದಂದು ನಾವು ನಮ್ಮ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸುತ್ತೇವೆ. ಈ ಮಹಾನ್ ಹೋರಾಟಗಾರರು ಎಲ್ಲೇ ಇರಲಿ, ದೇಶದಲ್ಲಿರಲಿ, ಹೊರ ದೇಶದಲ್ಲಿರಲಿ, ಈ ಸಂದರ್ಭದಲ್ಲಿ ನಾವು ಅವರ ಆಶೀರ್ವಾದಗಳನ್ನು ಪಡೆಯಬಯಸುತ್ತೇವೆ. ಇಂದು ನಾವೆಲ್ಲರೂ ಇಲ್ಲಿ ಸೇರಿರುವಾಗ, ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಡಲು ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿ ನೀಡಿದ ಆದರ್ಶಗಳು, ಸಿದ್ಧಾಂತಗಳು, ಮೌಲ್ಯಗಳು ಮತ್ತು ಕನಸುಗಳನ್ನು ಜ್ಞಾಪಿಸಿಕೊಳ್ಳುತ್ತೇವೆ. ಇಂದು ಇಲ್ಲಿ ಸೇರಿರುವವರೆಲ್ಲರೂ ಆ ಧ್ಯೇಯಕ್ಕಾಗಿ ನಮ್ಮನ್ನು ನಾವು ಪುನಃ ಕಾಯಾ, ವಾಚಾ, ಮನಸಾ ಸಮರ್ಪಿಸಿಕೊಳ್ಳೋಣ.

ಈ ಐದು ದಶಕಗಳ ಅವಧಿಯಲ್ಲಿ ನಾವು ಅನೇಕ ಬಗೆಯ ಕಷ್ಟ ಪರಿಸ್ಥಿತಿಗಳನ್ನು ದಿಟ್ಟತನದಿಂದ ಎದುರಿಸಿದೆವು. ನಾವು ಭಾರತದ ಏಕತೆ ಮತ್ತು ಸಮಗ್ರತೆಯನ್ನು ದಿಟ್ಟತನದಿಂದ, ನಮ್ಮ ರಕ್ತ ಬಲಿದಾನಗಳಿಂದ ಸಂರಕ್ಷಿಸಿದೆವು. ಭಾರತ ಬಲಿಷ್ಠ ರಾಷ್ಟ್ರ. ಅದನ್ನು ವಿಭಜಿಸಲು ಸಾಧ್ಯವಿಲ್ಲ ಎಂಬುದನ್ನು ನಾವು ಪ್ರಪಂಚಕ್ಕೆ ತೋರಿಸಿಕೊಟ್ಟಿರುತ್ತೇವೆ. ಯಾರೂ ಮತ್ತೊಮ್ಮೆ ನಮ್ಮನ್ನು ಆಳಲು ಸಾಧ್ಯವಿಲ್ಲವೆಂಬುದನ್ನು ನಾವು ವಿಶ್ವಕ್ಕೆ ತೋರಿಸಿಕೊಟ್ಟಿರುತ್ತೇವೆ. ಯಾರೂ ಭಾರತದ ಏಕತೆಯನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ ಎಂಬುದನ್ನು ನಾವು ಸ್ಪಷ್ಟಪಡಿಸಿರುತ್ತೇವೆ. ನಮ್ಮ ದೇಶದ ಭದ್ರತೆಗೆ, ನಮ್ಮ ದೇಶದ ಸ್ವಾತಂತ್ರ್ಯಕ್ಕೆ ಮತ್ತು ನಮ್ಮ ದೇಶದ ಏಕತೆಗೆ ಯಾವುದೇ ತ್ಯಾಗಕ್ಕಾಗಿ ನಾವು ಸಿದ್ದರಿದ್ದೇವೆಂದು ತೋರಿಸಿಕೊಟ್ಟಿರುತ್ತೇವೆ. ನಮ್ಮ ಯೋಧರು, ನಮ್ಮ ಅಧಿಕಾರಿಗಳು, ನಮ್ಮ ಗಡಿಗಳನ್ನು ರಕ್ಷಿಸಲು ಮತ್ತು ನಮ್ಮನ್ನು ಕಾಪಾಡಲು ತಮ್ಮ ತಾರುಣ್ಯವನ್ನು, ತಮ್ಮ ಜೀವನದ ಅತ್ಯುತ್ತಮ ಕಾಲವನ್ನು ಮುಡುಪಾಗಿಡುತ್ತಾರೆ. ಇದಕ್ಕೆ ಪ್ರತಿಯಾಗಿ ನಾವು ಅವರನ್ನು ನೋಡಿಕೊಳ್ಳುತ್ತೇವೆ. ಅತ್ಯುತ್ತಮ ಶಸ್ತ್ರಾಸ್ತ್ರಗಳನ್ನು ಒದಗಿಸುತ್ತೇವೆ. ಅಗತ್ಯವಾದ ಅತ್ಯುತ್ತಮ ಸಾಧನೆ ಸಾಮಗ್ರಿಗಳನ್ನು ಒದಗಿಸುತ್ತೇವೆ.

ನಮ್ಮ ಅರ್ಥವ್ಯವಸ್ಥೆಯ ಬಗ್ಗೆ ನಾವು ಸಾಕಷ್ಟು ಯಶಸ್ಸನ್ನು ಗಳಿಸಿದ್ದೇವೆ. ಇಂದು ನಮ್ಮ ಮೀಸಲು ವಿದೇಶಿ ವಿನಿಮಯ ಸುಮಾರು ಮೂವತ್ತು ಸಾವಿರ ಕೋಟಿ ರೂಪಾಯಿಗಳನ್ನು ಮುಟ್ಟಿದೆ ಹಾಗೂ ನಮಗೆ ಬೇಕಾದ ಯಾವುದೇ ಪದಾರ್ಥಗಳನ್ನು ಆಮದು ಮಾಡಿಕೊಳ್ಳಲು ತೊಂದರೆ ಇಲ್ಲವೆಂದು ತಿಳಿಸಲು ಹರ್ಷವಾಗುತ್ತದೆ. ಮತ್ತೊಂದೆಡೆ ನಾವು ಈ ದೀರ್ಘಾವಧಿಯಲ್ಲಿ ಕೈಗೊಂಡ ಕ್ರಮಗಳಿಂದಾಗಿ ನಮ್ಮ ರಫ್ತುಗಳು ಬೆಳೆಯುತ್ತಿರುವ ಲಕ್ಷಣವನ್ನು ತೋರುತ್ತಿದೆ. ಈ ಬಗ್ಗೆ ಕೆಲವು ಸಂದೇಹಗಳಿದ್ದವು. ಆದರೆ ಕಳೆದ ಒಂದೂವರೆ ತಿಂಗಳಿಂದ ನಮ್ಮ ರಫ್ತುಗಳು ವೃದ್ಧಿಗೊಳ್ಳುತ್ತಿರುವುದನ್ನು ಗಮನಿಸಿದ್ದೇವೆ.

ಸ್ವಾತಂತ್ರ್ಯ ಬಂದ ಸಮಯದಲ್ಲಿ ನಮ್ಮ ಉದ್ಯಮಿಗಳು ಕೆಲವೇ ಸರಳ ವಸ್ತುಗಳನ್ನು ತಯಾರಿಸುತ್ತಿದ್ದರು. ಇಂದು ಆಗಿರುವ ಅಭಿವೃದ್ಧಿಯಿಂದ ಮುಂದುವರೆದ ದೇಶಗಳ ವಸ್ತುಗಳಿಗೆ ಸಮನಾದ ವಸುಗಳನ್ನು ತಯಾರಿಸಬಲ್ಲಷ್ಟು ನಮ್ಮ ಕೈಗಾರಿಕೆಗಳು ಮುಂದುವರೆದಿವೆ. ನಾವು ಹೆಚ್ಚಿನ ಸಾಮರ್ಥ್ಯದೊಡನೆ ಮುನ್ನುಗ್ಗಿ ಇತರರೊಡನೆ ಸ್ಪರ್ಧಿಸುವ ಹಂತವನ್ನು ತಲುಪಿದ್ದೇವೆ.

ನಮ್ಮ ದೇಶದ ಕೈಗಾರಿಕಾಭಿವೃದ್ಧಿಗೆ ವಿದೇಶಿ ಬಂಡವಾಳವನ್ನು ಆಕರ್ಷಿಸುವಲ್ಲಿಯೂ ನಾವು ಯಶಸ್ವಿಯಾಗಿದ್ದೇವೆ. ಸುಮಾರು ಆರು ಸಾವಿರ ಕೋಟಿ ರೂಪಾಯಿಗಳ ಪ್ರಸ್ತಾಪ ಈಗಾಗಲೇ ನಮಗೆ ಬಂದಿದೆ. ಇದು ಕಾರ್ಯರೂಪಕ್ಕೆ ಬರಲು ಕೊಂಚ ಸಮಯ ಬೇಕಾಗಬಹುದಾದರೂ ಹಣ

ಹಾಗೂ ತಂತ್ರಜ್ಞಾನದ ದೃಷ್ಟಿಯಿಂದ ಇದು ಗಣನೀಯವಾದುದು. ಇದರೊಂದಿಗೆ ನಮ್ಮ ದೇಶದ ಕೈಗಾರಿಕೋದ್ಯಮಿಗಳೂ ಹೆಚ್ಚಿನ ಬಂಡವಾಳ ಹೂಡುವ ಸಾಧ್ಯತೆಗಳು ಅಪಾರವಾಗಿವೆ. ನಮಗೆ ಬಂದಿರುವ ಪ್ರಸ್ತಾಪಗಳ ಪ್ರಕಾರ ಸುಮಾರು ನಲವತ್ತು ಐವತ್ತು ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯಾಗಿ ನಮ್ಮ ಕೈಗಾರೀಕರಣಕ್ಕೆ ಬಹಳಷ್ಟು ಉತ್ತೇಜನ ಸಿಗುತ್ತದೆ. ನಮ್ಮ ಕೈಗಾರಿಕೆಗಳು ತ್ವರಿತಗತಿಯಲ್ಲಿ ಬೆಳೆದು ವಿಸ್ತರಿಸುವುದನ್ನು ನಾವು ಖಚಿತಪಡಿಸಿಕೊಳ್ಳುತ್ತೇವೆ.

ಇಂದು ನಾನು ಈ ಶಾಂತಿಪೂರ್ಣ ದೇಶದ ವಿಭಿನ್ನ ಭಾಗಗಳಲ್ಲಿ ಮತ್ತು ಮೂಲೆ ಮೂಲೆಗಳಲ್ಲಿನ ನನ್ನೆಲ್ಲ ನೂರೈದು ಕೋಟಿ ಸೋದರ ಸೋದರಿಯನ್ನು ಅಭಿನಂದಿಸುತ್ತೇನೆ. ಈ ನಮ್ಮ ಭಾರತ, ನಿಮ್ಮ ಮತ್ತು ನನ್ನ, ಶ್ರೀಮಂತರ, ಬಡವರ, ಯುವಕರ, ಹಿರಿಯರ ಎಲ್ಲ ಧರ್ಮಗಳಿಗೆ ಸೇರಿದವರ, ವಿವಿಧ ಕೋಮುಗಳಿಗೆ ಸೇರಿದವರ, ವಿಭಿನ್ನ ಭಾಷೆಗಳನ್ನು ಮಾತನಾಡುವವರ ಮತ್ತು ವಿಭಿನ್ನ ಸಂಸ್ಕೃತಿಗಳನ್ನು ಹೊಂದಿರುವವರ ದೇಶವಾಗಿದೆ. ನಮ್ಮ ಏಕತೆ ಸುಭದ್ರ, ನಮ್ಮ ಸಮಗ್ರತೆ ಶಾಶ್ವತ, ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿರುವ ನಮ್ಮ ನಾಡು ನಮ್ಮೆಲ್ಲರ ಹೆಮ್ಮೆಯ ನಾಡು. ನಮ್ಮ ಸ್ವಾತಂತ್ರ್ಯ, ನಮ್ಮ ಪ್ರಜಾಪ್ರಭುತ್ವ, ನಮ್ಮ ಜಾತ್ಯಾತೀತತೆ, ನಮ್ಮ ಸಮಾಜವಾದ, ನಮ್ಮ ಭದ್ರತೆ ಮತ್ತು ಅಲಿಪ್ತ ನೀತಿಗಳನ್ನು ಕಾಪಾಡಿಕೊಂಡು ಸಂಘಟಿತರಾಗಿ ಪ್ರಗತಿ ಪಥದಲ್ಲಿ ಹಂತ ಹಂತವಾಗಿ ಮುಂದೆ ಸಾಗುವುದು ಮತ್ತು ಭಾರತವನ್ನು ನಿಜವಾಗಿಯೂ ಒಂದು ಮಹಾನ್ ದೇಶವನ್ನಾಗಿಸುವುದು ನಮ್ಮ ದೃಢ ಸಂಕಲ್ಪ. ತಮಗೆ ಧನ್ಯವಾದಗಳು.